ವರದಿ ಬಂದಿದೆಯೆಂದು ನಾನು ಅಧಿಕೃತವಾಗಿ ಹೇಳುತ್ತಿದ್ದೇನೆ. ಬಂದಿಲ್ಲವೆಂದು ಅವರು ಹೇಳುವುದಾದರೆ ಅವರು ಅಧಿಕಾರಕ್ಕೆ ಬಂದು 7ತಿಂಗಳಾದರೂ ಕಾರ್ಡ್ ಇಲ್ಲದಿರುವವರನ್ನು ಐಟೆಂಟಿಫೈ ಮಾಡಿಲ್ಲವೆಂದರೆ, ಯಾವುದೋ ಒಂದು ಫಾರ್ಮೆಟ್ ಅನ್ನು ಮಾಡುತ್ತಿದ್ದೇವೆ, ಅದರ ಪ್ರಕಾರ ಮಾಡುವುದಕ್ಕೆ ಇನ್ನೂ ಆರು ತಿಂಗಳಾಗುತ್ತದೆ ಎಂದು ಹೇಳಿದರೆ ಇದು ಸರ್ಕಾರದ ಒಂದು ನಿರ್ಲಕ್ಷ್ಯತನವಾಗುತ್ತದೆ. ಮಾನ್ಯ ಮಂತ್ರಿಗಳು ಈ ರೀತಿ ಇದೆಯೆಂದು ಹೇಳಿದರು.....

ಅಧ್ಯಕ್ಷರು : 84 ಲಕ್ಷ ಕುಟುಂಬಗಳನ್ನು ಗುರುತಿಸಿದ್ದಾರೆ, 98 ಲಕ್ಷ ಕುಟುಂಬಗಳಿಗೆ ಕಾರ್ಡುಗಳನ್ನು ಕೊಟ್ಟಿದ್ದಾರೆ. ಇದು ಸ್ವಲ್ಪ ನ್ಯೂನತೆ ಇರುವುದರಿಂದ ಎಲ್ಲ ಪುನರ್ ವಿಮರ್ಶೆ ಮಾಡಿ ಹೊಸ ಫಾರ್ಮೆಟ್ ಪ್ರಕಾರ ಅರ್ಹರನ್ನು ಗುರುತಿಸುವ ಕೆಲಸವನ್ನು ಅಧಿಕಾರಿಗಳಿಗೆ ಒಪ್ಪಿಸಿದ್ದೇವೆ, ಆ ಬಗ್ಗೆ ಪೂರ್ಣ ಮಾಹಿತಿ ಇನ್ನೂ ಸರ್ಕಾರಕ್ಕೆ ಲಭ್ಯವಾಗಿಲ್ಲ ಎನ್ನುವ ಮಾತನ್ನು ಮಾನ್ಯ ಸಭಾನಾಯಕರು ಹೇಳಿದರು. ಇದು ಸ್ವಲ್ಪ ನಿಧಾನವಾಗಿದೆ, ಬೇಗ ಮಾಡಿ ಎಂದು ನೀವು ಸಲಹೆಯನ್ನು ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಡುಬಡವರು ಯಾರಿಗೆ ಹಸಿರು ಕಾರ್ಡನ್ನು ಕೊಡಬೇಕಾಗಿದೆ, ಈ ಕೆಲಸವನ್ನು ಇಡೀ ರಾಜ್ಯದಲ್ಲಿ ಎಲ್ಲಿಯೂ ಮಾಡಿಲ್ಲ.

ಅಧ್ಯಕ್ಷರು : ನಾವು ಒಂದು ಕೆಲಸ ಮಾಡೋಣ. ನಿಮ್ಮದು ಮೋಶನ್ ಇದೆಯಲ್ಲ, ಅದರ ಮೇಲೆ ಚರ್ಚೆ ಮಾಡುವಾಗ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಡವರಿಗೆ ನಾವು ಏನು ಹೇಳುವುದು?

ಅಧ್ಯಕ್ಷರು : ಈ ವಿಷಯವನ್ನು ಮತ್ತೊಮ್ಮೆ ಚರ್ಚೆ ಮಾಡುವುದಕ್ಕೆ ಸಮಯ ಸಿಗುತ್ತದೆ.

ಶ್ರೀ ಕಮರುಲ್ ಇಸ್ಲಾಂ : ಕಾರ್ಡಿನ ಬಗ್ಗೆ ಅರ್ಧಗಂಟೆ ಕಾಲಾವಧಿ ಚರ್ಚೆ ತೆಗೆದುಕೊಳ್ಳಬೇಕು. I request you Sir kindly to take up this subject for half-an-hour discussion. There are people even in Gulbarga who have not got the cards. Since 3 months cards are not available. You replace the cards afterwards but what about the people who have already been identified & did not get cards. ಎಲ್ಲಾ ಮತಕ್ಷೇತ್ರಗಳಲ್ಲೂ ಈ ತರಹ ನಡೆಯುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ

353 : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಸರ್ಕಾರದವರು ಕೈಗೊಂಡಿರುವ ಯೋಜನೆಗಳಾವುವು?

ಆ) ನವದೆಹಲಿಯಲ್ಲಿ ಪ್ರವಾಸೋದ್ಯಮ ಭವನವನ್ನು ನಿರ್ಮಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯ ಮಂತ್ರಿಗಳು) :

ಅ) ಪ್ರವಾಸೋದ್ಯಮವನ್ನು ವ್ಯಾಪಕವಾಗಿ ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಮೇ 1992ರಂದು ಪ್ರವಾಸೋದ್ಯಮ ನೀತಿಯನ್ನು ಘೋಷಿಸಿದೆ. ಈ ಪ್ರವಾಸೋದ್ಯಮ ನೀತಿಯ ಮೂಲ ಉದ್ದೇಶವೆಂದರೆ ಪ್ರವಾಸೋದ್ಯಮ ಸೌಲಭ್ಯಗಳಾದ ಹೋಟೆಲ್, ವೋಟೆಲ್ಸ್, ಹಾಲಿಡೇ ರಿಸಾರ್ಟ್ಸ್ ಅಮ್ಯೂಸ್‌ಮೆಂಟ್ ಪಾರ್ಕ್ಸ್

ಮುಂತಾದವುಗಳನ್ನು ಗುರುತಿಸಿದ ಮುಖ್ಯ ಪ್ರವಾಸೋದ್ಯಮ ಕೇಂದ್ರಗಳಲ್ಲಿ ನಿರ್ಮಿಸಲು ಖಾಸಗಿಯವರನ್ನು ಆಕರ್ಷಿಸುವುದಾಗಿದೆ. ಸರ್ಕಾರವು ಹೊಸ ಪ್ರವಾಸೋದ್ಯಮ ಯೋಜನೆಗಳನ್ನು ನಿರ್ಮಿಸುವವರಿಗೆ ರಿಯಾಯಿತಿ ಹಾಗೂ ಉದ ಉತ್ತೇಜಕಗಳಾದ ಸಬ್ಸಿಡಿ, ವೈಭೋಗಕರ ವಿನಾಯ್ತಿ, ಮಾರಾಟಕರ ವಿನಾಯ್ತಿ ಮುಂತಾದುವುಗಳನ್ನು ನೀಡುವುದಾಗಿ ಘೋಷಿಸಿದೆ.

ರಾಜ್ಯ ಸರ್ಕಾರವು ರಾಷ್ಟ್ರದಲ್ಲಿ ಹಾಗೂ ಹೊರರಾಷ್ಟ್ರಗಳಲ್ಲಿ ಪ್ರಚಾರವನ್ನು ಕೈಗೊಂಡು ರಾಜ್ಯಕ್ಕೆ ಪ್ರವಾಸಿಗರವನ್ನು ಆಕರ್ಷಿಸಲಾಗುವುದು ಮತ್ತು ಖಾಸಗಿಯವರಿಗೆ ಮಾರ್ಗದರ್ಶನ, ತರಬೇತಿಗಳನ್ನು ನೀಡಿ ಪ್ರವಾಸೋದ್ಯಮ ಮೂಲ ಭೂತ ಸೌಲಭ್ಯಗಳನ್ನು ಒದಗಿಸಿ ರಾಜ್ಯಕ್ಕೆ ಬರುವ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ಈ ಗದ್ದಲದಲ್ಲಿ ನಿಮ್ಮ ಪಕ್ಕದಲ್ಲಿರುವ ಸದಸ್ಯರು ಇಂಗ್ಲಿಷಿನಲ್ಲಿ ಮಾತನಾಡಿದರೆ ಅದು ನಿಮ್ಮ ಗಮನಕ್ಕೆ ಬರಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾವೂ ಒಂದೊಂದು ಸಾರಿ ಇಂಗ್ಲೀಷಿನಲ್ಲಿ ಮಾತನಾಡುತ್ತೀರಿ. ಯಡಿಯೂರಪ್ಪನವರೂ ಮಾತನಾಡುತ್ತಾರೆ, ಮುಖ್ಯಮಂತ್ರಿಗಳೂ ಮಾತನಾಡುತ್ತಾರೆ. ಇದು ನನಗೆ ಬಹಳ ತಾಪತ್ರಯವಾಗಿಬಿಟ್ಟಿದೆ. ಈಗ ನಾನು ಆಹಾರದ ಬಗ್ಗೆ ಕೇಳುವ ಹಾಗಿಲ್ಲ.

ಅಧ್ಯಕ್ಷರು : ಬೇಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನನ್ನ 353ನೇ ಪ್ರಶ್ನೆಗೆ ಉತ್ತರ ಬಂದಿದೆ. ಇಲ್ಲಿ ಉಪಮುಖ್ಯಮಂತ್ರಿಗಳು ಡಿ.ಎಸ್. ಶಿವಣ್ಣ ಅಂತಿದೆ. ನನಗೆ ಬಹಳ ಗಾಬರಿಯಾಗಿದೆ. ಮುಖ್ಯಮಂತ್ರಿಗಳು ಇವರನ್ನು ಡಿ.ಎಸ್. ಶಿವಣ್ಣ - ಉಪ ಮುಖ್ಯಮಂತ್ರಿಗಳು ಎಂದು ಇದೆ. ಇವರು ಯಾರು? ಡಿ.ಎಸ್. ಶಿವಣ್ಣ ಎನ್ನುವವರು ಹೊಸದಾಗಿ ಪ್ರವಾಸೋದ್ಯಮ ಖಾತೆಗೆ ಬಂದವರಾ, ಯಾವ ಕ್ಷೇತ್ರದವರು, ಯಾವಾಗ ಗೆದ್ದಿದ್ದು, ಇವರು ಯಾವಾಗ ಸಚಿವಸಂಪುಟಕ್ಕೆ ಬಂದರು? ಇವರನ್ನು ಉಪಮುಖ್ಯಮಂತ್ರಿಗಳನ್ನಾಗಿ ಮಾಡಿದ್ದು ಯಾವಾಗ? ಇದನ್ನು ಮಾನ್ಯ ಪಟೇಲರು ಬಹಿರಂಗವಾಗಿ ಪ್ರತಿಭಟಿಸದೆ ಕುಳಿತಿರತಕ್ಕಂಥಾದ್ದರ ಉದ್ದೇಶ ಏನು? ಇದುವರೆಗೂ ಮಂತ್ರಿಗಳ ಸಹಿ, ಮಂತ್ರಿಗಳ ಹೆಸರು ಬರುತ್ತಿತ್ತು. ಇಲ್ಲಿ ಡಿ.ಎಸ್. ಶಿವಣ್ಣ ಎಂದು ಬಂದಿದೆ. ಆದ್ದರಿಂದ ಅವರು ಯಾವಾಗ ಮಂತ್ರಿಮಂಡಲಕ್ಕೆ ಬಂದರು ಎಂಬುದನ್ನು ಪರಿಚಯ ಮಾಡಿಸಬೇಕು.

ಅಧ್ಯಕ್ಷರು : ನೀವು ಎಷ್ಟು ಬುದ್ಧಿವಂತರು, ನಿಮಗೆ ಅಷ್ಟೂ ಗೊತ್ತಾಗಲಿಲ್ಲವೇ. ಪಟೇಲರು ಮತ್ತು ಶಿವಾ ಎಲ್ಲರೂ ಒಂದೇ ಅಲ್ವೆ?

ಶ್ರೀ ವಾಟಾಳ್ ನಾಗರಾಜ್ : ತಾವು ಇದನ್ನು ಅಷ್ಟು ಸುಲಭವಾಗಿ ಬಿಡುವಂಥಾದ್ದು ಅಲ್ಲ. ಸನ್ಯಾಸ್ಯ ಪಟೇಲರು ಇದಕ್ಕೆಲ್ಲ ಸಿಡಿದೇಳತಕ್ಕಂಥವರು. ಆದರೆ ಅವರು ಮೌನವಾಗಿ ಕುಳಿತುಕೊಂಡು, ನನ್ನನ್ನು ತೆಗದರೂ ಚಿಂತೆಯಿಲ್ಲ ಎಂದು ಶಾಂತವಾಗಿ ಕುಳಿತುಕೊಂಡಿರುವುದು ಸರಿಯಲ್ಲ. ತಾವು ಅವರು ಉಪಮುಖ್ಯಮಂತ್ರಿಗಳೇ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಜಿ.ಹೆಚ್. ಪಟೇಲ್ : ಇಷ್ಟು ವರ್ಷ ವಿಧಾನಸಭಾ ಸದಸ್ಯರಾಗಿ ಅನುಭವ ಇರತಕ್ಕಂಥವರು, ಇಷ್ಟೂ ಗೊತ್ತಾಗಲಿಲ್ಲವೆ? ಉತ್ತರದಲ್ಲಿ ಉಪಮುಖ್ಯಮಂತ್ರಿಗಳು

ಎಂದು ಇದೆ. ಕೆಳಗಡೆ ಸರ್ಕಾರದ ಅಧೀನ ಕಾರ್ಯದರ್ಶಿ ಶಿವಣ್ಣ ಎನ್ನುವವರು ಸಹಿ ಮಾಡಿದ್ದಾರೆ. ಶಿವಣ್ಣನವರಿಗೂ, ಉಪಮುಖ್ಯಮಂತ್ರಿಗಳಿಗೂ ವ್ಯತ್ಯಾಸ ಬೇಡವೆ?

ಶ್ರೀ ವಾಟಾಳ್ ನಾಗರಾಜ್: ಜೆ.ಹೆಚ್. ಪಟೇಲ್ - ಶಿವಣ್ಣ ಎಂದು ಹಾಕಿದರೆ ನಾವು ಎರಡು ಭಾಗ ಮಾಡುವುದಕ್ಕೆ ಆಗುತ್ತದೆಯೇ? ಜೆ.ಹೆಚ್. ಪಟೇಲ್ ಅಂತಾನೂ ಇಲ್ಲಿ ಇಲ್ಲ. ಆದರೆ ಬರೀ ಶಿವಣ್ಣ ಅಂತಿದೆ. ಮಾನ್ಯ ಪಟೇಲರು ಮಂತ್ರಿಮಂಡಲದಲ್ಲಿ ಉಪಮುಖ್ಯಮಂತ್ರಿಗಳಾಗಿ ಉಳಿದಿದ್ದರೆ ನನಗೆ ಬಹಳ ಸಂತೋಷ. ಅದರ ಬಗ್ಗೆ ನನ್ನ ಬೇರೆ ಅಭಿಪ್ರಾಯ ಇಲ್ಲ. ಆದ್ದರಿಂದ ತಮ್ಮ ಪ್ರಕಾರ ಅವರು ಇದ್ದಾರೆ ಎಂದು ನಾನು ಅಂದುಕೊಳ್ಳಬೇಕು.

12.00 ಪಿ.ಎಂ

ಶ್ರೀ ಜೆ.ಹೆಚ್. ಪಟೇಲ್ : ಪ್ರವಾಸೋದ್ಯಮ ಬಹಳ ಪ್ರಾಮುಖ್ಯವಾದ ವಿಷಯ, ಇಲ್ಲಿ, ಶಿವಣ್ಣನವರ ಹೆಸರನ್ನು ತೆಗೆದುಕೊಂಡು ಬರುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಪ್ರಾಮುಖ್ಯವಾದ ಉತ್ತರವನ್ನು ಶಿವಣ್ಣನವರ ಹೆಸರಿನಲ್ಲಿ ಕಳುಹಿಸುತ್ತಿದ್ದೀರಲ್ಲಾ ಎಂದು. ಅಷ್ಟೇ ಬೇರೆ ಏನೂ ಇಲ್ಲ. ಈ ಪ್ರವಾಸೋದ್ಯಮ ಯೋಜನೆಗಳಲ್ಲಿ ಭಾಗಿಯಾಗಿರತಕ್ಕ ಖಾಸಗಿಯವರಿಗೆ ನಾವು ಅನೇಕ ಸೌಲಭ್ಯಗಳನ್ನು ಕೊಡುತ್ತೇವೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಯಾವ ಯಾವ ರೀತಿಯ ಸೌಲಭ್ಯಗಳನ್ನು ಕೊಡುತ್ತಾರೆನ್ನುವುದನ್ನು ಅವರು ಸ್ಪಷ್ಟಪಡಿಸಬೇಕು ಮತ್ತು ಪ್ರವಾಸೋದ್ಯಮ ಇಲಾಖೆ ವತಿಯಿಂದ, ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಬೆಳವಣಿಗೆ ಮಾಡಬೇಕೆಂದು ಹೇಳಿ, ಅವರು ಸಿಂಗಪುರಕ್ಕೆ ಪ್ರವಾಸ ಹೋಗಿದ್ದರು. ಈ ಸಿಂಗಪುರ ಪ್ರವಾಸದಿಂದ ನಮಗೆ ಆಗತಕ್ಕ ಲಾಭಗಳು ಏನೇನು? ಯಾವ ಯಾವ ಸಂಸ್ಥೆಯವರು ಕರ್ನಾಟಕಕ್ಕೆ ಬರುತ್ತಿದ್ದಾರೆ. ಆ ಸಂಸ್ಥೆಯವರಿಗೂ ಇವರಿಗೂ ಆಗಿರತಕ್ಕ ಒಪ್ಪಂದಗಳು ಏನೇನು ಎನ್ನುವುದನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ತಿಳಿಸಬೇಕು. ಅದರ ಜೊತೆಗೆ ಹೋಟೆಲ್ ಉದ್ಯಮವನ್ನೂ ಸಹಿತ ಕೈಗಾರಿಕೆ ಎಂದು ಪ್ರವಾಸೋದ್ಯಮಕ್ಕೆ ಸೇರಿಸಿರುವಾಗ ಕೈಗಾರಿಕೆಗಳಿಗೆ ನೀಡಿರತಕ್ಕ ವಿದ್ಯುಚ್ಛಕ್ತಿ ದರವನ್ನು ಈ ಹೋಟೆಲಿನವರಿಗೂ ತಾವು ನೀಡುತ್ತೀರಾ? ಇದರಲ್ಲಿ ಎರಡು ಭಾಗ ಏಕೆ ಮಾಡಿದ್ದೀರಿ? ಪ್ರವಾಸೋದ್ಯಮದಲ್ಲಿ ಹೋಟೆಲಿನವರನ್ನೂ ಕೈಗಾರಿಕೋದ್ಯಮವೆಂದು ತೀರ್ಮಾನ ಮಾಡಿರುವಾಗ, ಹೋಟೆಲಿನವರಿಗೇ ಬೇರೆ, ಕೈಗಾರಿಕೆಗಳಿಗೇ ಬೇರೆ ಎಂದು ಬೇರೆ ಬೇರೆ ವಿದ್ಯುಚ್ಛಕ್ತಿ ದರವನ್ನು ನಿಗದಿ ಮಾಡಿ, ಭಾಗ ಮಾಡಿರುವುದು ಸರಿಯೇ? ಇದರ ಬಗ್ಗೆ ತೀರ್ಮಾನ ಮಾಡುತ್ತೀರಾ? ಮತ್ತು ಹಿಂದಿನ ವರ್ಷ ನಮ್ಮ ಸಮಿತಿಯ ವತಿಯಿಂದ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದೇವೆ. ಆ ಸಲಹೆಗಳ ಬಗ್ಗೆ ತಾವೇನು ಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ನಾವು ಪ್ರವಾಸೋದ್ಯಮದ ಬಗ್ಗೆ ಮಾಡಬೇಕಾದದ್ದು ಬಹಳವಿದೆ, ನಾನು ಒಪ್ಪಿಕೊಳ್ಳುತ್ತೇನೆ. ಅತ್ಯಂತ ಆಕರ್ಷಣೀಯವಾದ ಪ್ರವಾಸೋದ್ಯಮ ಕೇಂದ್ರಗಳು ಕರ್ನಾಟಕದಲ್ಲಿ ಇವೆ. ಇಡೀ ಭಾರತದಲ್ಲಿ ಅಥವಾ ವಿಶ್ವದಲ್ಲಿಯೇ ಕಾಣದಂಥ ಅತ್ಯಂತ ಆಕರ್ಷಣೀಯ ಕೇಂದ್ರಗಳು ನಮ್ಮ ರಾಜ್ಯದಲ್ಲಿ ಇದ್ದಾಗ್ಯೂ, ಅವುಗಳು ಇವತ್ತು ಡೆವಲಪ್ ಆಗಿಲ್ಲ. ಅದು ಯಾವ ಕಾರಣಕ್ಕೆ ಎಂಬುದನ್ನಾಗಲೀ ಅಥವಾ ಯಾರ ಮೇಲೂ ನಾನು ಹೇಳುತ್ತಾ ಇಲ್ಲ. ಒಂದನೆಯದಾಗಿ, ಅಂತರರಾಷ್ಟ್ರೀಯ ಪ್ರವಾಸಿಗರು ದೆಲ್ಲಿಯಿಂದ ಬಂದು, ರಾಜಾಸ್ಥಾನದ ಸುತ್ತಮುತ್ತ ನೋಡಿಕೊಂಡು ವಾಪಸ್ ಹೋಗುತ್ತಾರೆ. ನಾವು ದೆಲ್ಲಿ ಸರ್ಕಾರದವರನ್ನು ಹಿಂದೆಯೂ ಕೇಳಿದ್ದೇವೆ, ಈಗಲೂ ಕೇಳುತ್ತಿದ್ದೇವೆ.

ಪ್ರವಾಸೋದ್ಯಮದ ವಿಷಯ ಬಂದಾಗ, ದಕ್ಷಿಣ ಎಂದು ಬಂದಾಗ ಕರ್ನಾಟಕದಲ್ಲಿನ ಕೆಲವು ಅಂಶಗಳನ್ನು ಗುರುತಿಸಿ ಎಂದು ಕೇಳುತ್ತಿದ್ದೇವೆ. ಇಡೀ ಪ್ರಪಂಚದಲ್ಲಿಯೇ ಕಾಣದೇ ಇರತಕ್ಕ, ಅದು ಗೊಮ್ಮಟೇಶ್ವರ ಇರಬಹುದು, ಜೋಗ್ ಜಲಪಾತ ಇರಬಹುದು ಇಂತಹವುಗಳನ್ನು ಪ್ರೊಜೆಕ್ಟ್ ಮಾಡಿಲ್ಲ. ಇದರಲ್ಲಿ ನಮ್ಮ ತಪ್ಪು ಇರಬಹುದು. ಆದ್ದರಿಂದ, ಇವತ್ತು ನಾನು ವಾಟಾಳ್ ನಾಗರಾಜ್‌ರವರಿಗೆ ಹೇಳುತ್ತಿದ್ದೇನೆ. ಈ ಪ್ರವಾಸೋದ್ಯಮಕ್ಕೆ ನಾವು ಬರೀ ದುಡ್ಡು ಖರ್ಚು ಮಾಡುವುದಲ್ಲ. ಈ ಪ್ರವಾಸೋದ್ಯಮ ಅತ್ಯಂತ ಒಳ್ಳೆಯ ಕೈಗಾರಿಕೆ. ಅತಿ ಕಡಿಮೆ ಬಂಡವಾಳದಿಂದ ಹೆಚ್ಚು ಜನರಿಗೆ ಕೆಲಸ ಕೊಡುವಂಥ ಉದ್ಯಮ ಎಂದರೆ ಅದು ಪ್ರವಾಸೋದ್ಯಮ. ಇವತ್ತು ಕೇಂದ್ರಗಳನ್ನು ಗುರುತಿಸಿದ್ದೇವೆ. ಮೊದಲನೆಯದಾಗಿ ಟ್ರಾನ್ಸ್‌ಪೋರ್ಟ್. ಇದಕ್ಕೋಸ್ಕರ ಬೆಂಗಳೂರಿನಿಂದ ಕರ್ನಾಟಕದೊಳಗೆ ಸಾಧ್ಯವಾಗದೆ ಒಂದು ಏರ್ ಟ್ಯಾಕ್ಸಿ ಸರ್ವೀಸ್ ರನ್ ಮಾಡಬೇಕೆಂದಿದ್ದೇವೆ. ಈ ರೀತಿ ರನ್ ಮಾಡುವವರೂ ತಯಾರಿದ್ದಾರೆ. ನಮಗೆ ಬಳ್ಳಾರಿಯಲ್ಲಿ ಏರ್ ಸ್ಟ್ರಿಪ್ ಇದೆ, ಬೀದರ್‌ನಲ್ಲಿ ಇದೆ. ಆದರೆ, ಇವತ್ತು ಗುಲ್ಬರ್ಗಾ ಮತ್ತು ಬಿಜಾಪುರದ ಕಡೆ ಏರ್ ಸ್ಟ್ರಿಪ್ ಇಲ್ಲ. ಅದಕ್ಕೋಸ್ಕರ ರಾಜ್ಯಸರ್ಕಾರದವರು ಅಲ್ಲಿ ಏರ್ ಸ್ಟ್ರಿಪ್ ಮಾಡಿ, ಯಾರಾದರೂ ಪ್ರೈವೇಟ್ ಏಜೆನ್ಸಿಯವರಿಂದ, ಈ ಸ್ಥಳಗಳಿಗೆ ಅಂದರೆ ಒಳ್ಳೆಯ ಹೆಸರು ಇರತಕ್ಕಂಥ ಐಹೊಳೆ, ಪಟ್ಟದಕಲ್ಲು ಮುಂತಾದ ಪ್ರಪಂಚದ ಇತಿಹಾಸದಲ್ಲಿ ಬರತಕ್ಕಂಥ ಕೆಲವು ಕಲೆ, ಸಂಸ್ಕೃತಿ ಇರತಕ್ಕಂಥ ಕೇಂದ್ರಗಳು ಇವೆ.

ಅದಕ್ಕೋಸ್ಕರ ರಾಜ್ಯಸರ್ಕಾರದ ವತಿಯಿಂದ, ಆಗದೇ ಇದ್ದರೂ ಸರ್ಕಾರದ ಸಹಕಾರದಿಂದ ಅಲ್ಲಿ ಸೌಕರ್ಯ ಕೊಟ್ಟಿದ್ದೇವೆ. ಅಂದರೆ, ಹೋಟೆಲಿನಲ್ಲಿ ಲಕ್ಸುರಿ ಟ್ಯಾಕ್ಸ್ ಹಾಕುವುದಿಲ್ಲವೆಂದು ಹೇಳಿದ್ದೇವೆ. ಏಕೆಂದರೆ, ಇವತ್ತು ಜೋಗ್ ಜಲಪಾತ, ಇಂತಹ ದೊಡ್ಡ ಜಲಪಾತ ಇಡೀ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲ, ನಾವು ನಯಾಗರವನ್ನೂ ನೋಡಿದ್ದೇವೆ. ಆದರೆ, ಇಷ್ಟು ಎತ್ತರವಾದ ಜಲಪಾತ ಅಲ್ಲ. ಪ್ರವಾಸಿಗರಿಗೆ ಬೇಕಾಗಿರುವುದು ಏನು, ಉಳಿದುಕೊಳ್ಳುವುದಕ್ಕೆ ಒಂದು ಸ್ಥಳ. ಅಂತರ ರಾಷ್ಟ್ರೀಯ ಮಟ್ಟದಲ್ಲಿರುವುದು ಬೇರೆ. ನಮ್ಮಲ್ಲಿ ಬಡ ಜನರು ಹೋಗದೆ ಏನು ಮಾಡಬೇಕು, ಅದು ಬೇರೆ. ನಮ್ಮ ರಾಜ್ಯದ ಪ್ರವಾಸಿಗರಿಗೆ ಬೇರೆ ವ್ಯವಸ್ಥೆ, ಅಂತರರಾಷ್ಟ್ರೀಯ ಪ್ರವಾಸಿಗರಿಗೇ ಬೇರೆ ವ್ಯವಸ್ಥೆ. ಆದ್ದರಿಂದ, ಇವತ್ತು ಖಾಸಗಿ ವಲಯದಲ್ಲಿ, ನಾವು ತಾಜ್ ಹೋಟೆಲ್ ಗ್ರೂಪ್‌ನವರೊಡನೆ, ಜಾಯಿಂಟ್ ಸೆಕ್ಟಾರ್ ಕಂಪನಿ ಮಾಡಿದ್ದೇವೆ. ಆ ಕಂಪನಿ ಮೂಲಕ 4 ಕಡೆಗಳಲ್ಲಿ, 4 ಸ್ಟಾರ್ ಹೋಟೆಲ್ ಮಾಡುತ್ತಿದ್ದೇವೆ. ಒಂದು ಶಿವಮೊಗ್ಗದಲ್ಲಿ ಸಾಧ್ಯವಾದರೆ ಜೋಗ್‌ಜಲಪಾತದ ಹತ್ತಿರ ಮಾಡಬೇಕೆಂದಿದ್ದೇವೆ. ಹಾಗೆಯೇ ಹಾಸನದಲ್ಲಿ ಮಾಡಬೇಕೆಂದಿದ್ದೇವೆ. ಹಾಸನದ ಸುತ್ತಮುತ್ತ ಒಳ್ಳೆಯ ಕೇಂದ್ರಗಳು ಇವೆ. ಅಲ್ಲಿ ಉಳಿದುಕೊಳ್ಳುವುದಕ್ಕೆ ಅಂತರರಾಷ್ಟ್ರೀಯ ಮಟ್ಟದ ವ್ಯವಸ್ಥೆ ಇಲ್ಲ. ಆದ್ದರಿಂದ, 4 ಕಡೆ, 4 ಸ್ಟಾರ್ ಹೋಟೆಲ್‌ಗಳು, ಸುಮಾರು 20 ಲಕ್ಸುರಿ ಬಸ್ಸುಗಳು, ಏರ್ ಟ್ಯಾಕ್ಸಿಗಳನ್ನು ರನ್ ಮಾಡುವುದಕ್ಕೆ ಈ ವಲಯದಲ್ಲಿ ಖಾಸಗಿ ಬಂಡವಾಳ ಹಾಕುವುದಕ್ಕೆ ಕಂಪನಿಗಳು ಮುಂದೆ ಬಂದಿವೆ. ಅವರ ಪೈಕಿ, ಸಿಂಗಪುರದ ಜೆಸ್ಟಲರ್ ವೀಲ್ ಕಂಪನಿ. ಇವರು ಬೆಂಗಳೂರಿನಲ್ಲಿ ಇಂಟರ್‌ನ್ಯಾಷನಲ್ ಕನ್‌ವೆನ್‌ಷನಲ್ ಸೆಂಟರ್ ಮಾಡುತ್ತೇವೆಂದು ಬಂದಿದ್ದಾರೆ. ಅದೇ ಕಂಪನಿಯ ಇನ್ನೊಬ್ಬ ಪಾರ್ಟನರ್ ಆಗಿರತಕ್ಕಂಥವರು ಲಕ್ಸುರಿ ಬಸ್ಸುಗಳನ್ನು ಬೆಂಗಳೂರಿನಿಂದ ಬೇರೆ ಬೇರೆ ಸ್ಥಳಗಳಿಗೆ ರನ್ ಮಾಡುತ್ತೇವೆಂದು ಬಂದಿದ್ದಾರೆ. ಸಿಂಗಪುರದಿಂದ ಮತ್ತು ಮಲೇಷಿಯಾದಿಂದ ಬಂದಿದ್ದಾರೆ.

ಕೆಲಸ ಪ್ರಾರಂಭ ಮಾಡುತ್ತಿದ್ದೇವೆ. ಆದರೆ, ಮಾನ್ಯಸದಸ್ಯರಿಗೆ ಹೇಳುವುದು ಇಷ್ಟೆ. ನಮ್ಮ ರಾಜ್ಯದಲ್ಲಿರತಕ್ಕ ಪ್ರವಾಸಿ ಕೇಂದ್ರಗಳಿಗೆ, ಅಂತರರಾಷ್ಟ್ರೀಯ ಮಟ್ಟದ ಪ್ರವಾಸಿಗರು

ಹೋಗಲು ಲಕ್ಷುರಿ ಬಸ್ಸುಗಳನ್ನು ತರಿಸುತ್ತಿದ್ದೇವೆ. ಇವುಗಳನ್ನು ಓಡಿಸುವವರು ಬೇರೆ ಕಂಪನಿಯವರು, ನಾವಲ್ಲ. ನಮ್ಮ ಕೆ.ಎಸ್.ಆರ್.ಟಿ.ಸಿ. ಯಿಂದ ಓಡಿಸುವುದಿಲ್ಲ. ಏಕೆಂದರೆ, ಆ ಚಾರ್ಜ್ ಕೊಟ್ಟು ನಮ್ಮ ಜನರಿಗೆ ಹೋಗುವುದಕ್ಕಾಗುವುದಿಲ್ಲ. 1-2 ಸಾವಿರ ರೂಪಾಯಿಗಳ ಬಾಡಿಗೆ ಕೊಟ್ಟು ರೂಮುಗಳಲ್ಲಿ ನಮ್ಮ ಜನರು ಇರುವುದಕ್ಕಾಗುವುದಿಲ್ಲ. ಆದರೆ, ಹೊರಗಡೆಯಿಂದ ಬಂದವರು ಇರುತ್ತಾರೆ. ಅವರಿಗೆ 200-300 ಡಾಲರ್ ಎಂದರೆ ಇವತ್ತು 9 ಸಾವಿರ ರೂಪಾಯಿಗಳಾಯಿತು. ಅದೇ ರಾಜಾಸ್ಥಾನದ ಜೈಪುರ, ಜೋದ್‌ಪುರದ ಹತ್ತಿರವೋ ಹೋದರೆ, 300 ಡಾಲರ್ ಕೊಟ್ಟು ಹೋಟೆಲಿನಲ್ಲಿರುತ್ತಾರೆ. 300 ಡಾಲರ್ ಎಂದರೆ, ಇವತ್ತು 10 ಸಾವಿರ ರೂಪಾಯಿಗಳಾಗುತ್ತವೆ. ಆದ್ದರಿಂದ ಪ್ರವಾಸೋದ್ಯಮಕ್ಕೆ ಬೇರೆ ಹೊಸ ಆಯಾಮವನ್ನು ಕೊಡಬೇಕು. ನಮ್ಮಲ್ಲಿ ತಿರುಪತಿಗೋ ಅಥವಾ ಬೇರೆ ಇನ್ನೆಲ್ಲಿಗೋ ಹೋಗಿ ಬಂದಹಾಗೆ ಅಲ್ಲ. ಪ್ರವಾಸೋದ್ಯಮಕ್ಕೆ ಅತ್ಯಾಧುನಿಕವಾದ ಸವಲತ್ತುಗಳನ್ನು ಕಲ್ಪಿಸತಕ್ಕ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಈಗಾಗಲೇ ಇಷ್ಟು ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಿಗೆ ಸಮಾಧಾನವಾಗದಿದ್ದರೆ, ಕೆಲವು ಕಡೆಗಳಿಗೆ ತಾವೂ ಸಹ ಹೋಗಿ ನೋಡಬಹುದು. ತಮ್ಮ ಸಮಿತಿಯ ವರದಿಯಲ್ಲಿ ಏನು ಹೇಳಿದ್ದೀರಿ. ವಿದ್ಯುಚ್ಛಕ್ತಿ ಬಗ್ಗೆ ಹೇಳಿದ್ದೀರಿ, ಪ್ರವಾಸೋದ್ಯಮದ ಬಗ್ಗೆ ಅಲ್ಲ. ವಿದ್ಯುಚ್ಛಕ್ತಿ ವಿಷಯ ಬಂದಾಗ, ಅದರ ಬಗ್ಗೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಪ್ರಶ್ನೆ ಏನೆಂದರೆ, ಅವರು ಹೇಳಿದರು, ಸಿಂಗಪುರಕ್ಕೆ ಹೋಗಿ ಬಸ್ಸುಗಳ ಕಂಪನಿಯವರನ್ನು ಕರೆದುಕೊಂಡು ಬರುತ್ತೇವೆ ಎಂದು. ನಮ್ಮಲ್ಲಿ ಬಸ್ಸು ಓಡಿಸುವುದಕ್ಕೆ ಬಸ್ಸುಗಳು ಇಲ್ಲವೇ? ನಮ್ಮಲ್ಲಿ ಸುಖಾಸೀನ ಮಾಡಿರತಕ್ಕ ಬಸ್ಸುಗಳು ಇಲ್ಲವೋ? ಈ ಬಸ್ಸುಗಳನ್ನು ಓಡಿಸುವುದಕ್ಕೆ ಸಿಂಗಪುರದಿಂದ ಯಾವುದೋ ಕಂಪನಿಯವರು, ಖಾಸಗಿಯವರು ಬಂದು ಮಾಡಬೇಕೇ? ತಮಿಳುನಾಡಿನಲ್ಲಿ ಎಷ್ಟು ಸುಂದರವಾದ ಬಸ್ಸುಗಳನ್ನು ಓಡಿಸುತ್ತಿದ್ದಾರೆ, ತಾವು ಹೋಗಿ ನೋಡಿಕೊಂಡು ಬರಬೇಕು. ಅಲ್ಲಿ ಹವಾನಿಯಂತ್ರಣವಿರುವ ಉತ್ತಮವಾದ ಬಸ್ಸುಗಳನ್ನು ಓಡಿಸುತ್ತಾರೆ. ಈ ಬಸ್ಸುಗಳನ್ನು ಓಡಿಸುವವರನ್ನು ಕರೆದುಕೊಂಡು ಬರುವುದಕ್ಕೆ ತಾವು ಸಿಂಗಪುರಕ್ಕೆ ಹೋಗಬೇಕಾಗಿತ್ತೆ ಎನ್ನುವುದು ನನ್ನ ನೇರವಾದ ಪ್ರಶ್ನೆ. ಮತ್ತು ನಮ್ಮ ಪ್ರವಾಸೋದ್ಯಮದ ಹೋಟೆಲಿನಲ್ಲಿ ಮಾಡುವ ತಿಂಡಿಗಳನ್ನು ಹೋಗಿ ನೋಡಬೇಕು. ಮಾನ್ಯ ಅಧ್ಯಕ್ಷರೇ, ತಾವೂ ನೋಡಿರಬೇಕು. ಅಲ್ಲಿಯ ತಿಂಡಿಗಳನ್ನು ನಾಯಿ ನರಿಗಳೂ ಕೂಡ ತಿನ್ನುವುದಕ್ಕಾಗುವುದಿಲ್ಲ. ಅಂದರೆ, ನಮ್ಮ ಪ್ರವಾಸೋದ್ಯಮವನ್ನು ಎಷ್ಟರಮಟ್ಟಿಗೆ ಬೆಳೆಸುತ್ತಿದ್ದೇವೆ ಎಂದು ಹೇಳಿದರೆ, ತಾವು ಒಂದೇ ಒಂದು ಬೆಂಗಳೂರು - ಮೈಸೂರು ರಸ್ತೆಯಲ್ಲಿ ನೋಡಬೇಕು. ಈ ರಸ್ತೆಯಲ್ಲಿ ಹೋದರೆ, ಮಂಡ್ಯ ಸಮೀಪ, ಮದ್ದೂರು ವಡೆ ಹೋಟೆಲಿಗೆ ಹೋಗುತ್ತಾರೆಯೇ ಹೊರತು, ನಮ್ಮ ಹೋಟೆಲುಗಳು ಎಷ್ಟೇ ಸುಂದರವಾಗಿದ್ದರೂ ಸಹ ಅಲ್ಲಿ ಯಾರೂ ಹೋಗುವುದಿಲ್ಲ. ಕಾರಣ ಏನೆಂದರೆ, ನಿಮ್ಮ ತಿಂಡಿಯ ಗುಣಮಟ್ಟ, ಆ ಮಟ್ಟದಲ್ಲಿರುತ್ತದೆ. ಮತ್ತು ಈ ಪ್ರವಾಸೋದ್ಯಮದವರು ಕೊಡತಕ್ಕ ಕೊಠಡಿಗಳಲ್ಲಿ ಇರತಕ್ಕ ಹಾಸಿಗೆಗಳು, ದುಪ್ಪಟ್ಟಿಗಳು ಇವುಗಳ ವ್ಯವಸ್ಥೆ ನೋಡಿದರೆ, ವಿದೇಶದವರು ಜನ್ಮಜನ್ಮಾಂತರಕ್ಕೂ ಕರ್ನಾಟಕಕ್ಕೆ ಬರಬಾರದು ಎನ್ನುವ ವ್ಯವಸ್ಥೆ ಇದೆ. ಇವುಗಳನ್ನು ಸರಿಪಡಿಸುವುದಕ್ಕೆ ಏನು ಮಾಡಿದ್ದೀರಿ. ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಏನೆಂದರೆ, ಬರೀ ಹೊರದೇಶದವರಿಗೆ ಆಕರ್ಷಣೆ ಮಾಡತಕ್ಕ ವಿಚಾರವೇ ನಿಮ್ಮಲ್ಲಿದೆ. ನಮ್ಮ ರಾಜ್ಯದಲ್ಲಿರತಕ್ಕ ಪ್ರವಾಸೋದ್ಯಮದ ಸವಿಯನ್ನು ನೋಡತಕ್ಕ ನಮ್ಮ ಜನರಿಗೆ ಏನೇನು ಅನುಕೂಲತೆ ಮಾಡಿದ್ದೀರಿ ಎನ್ನುವುದನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ಜೆ.ಹೆಚ್. ಪಟೇಲ್ : ನಾನು ಮೊದಲೇ ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ 5 ವಲಯಗಳು ಇವೆ. ಉತ್ತರ ಕರ್ನಾಟಕದ ಕೆಲವು ಭಾಗಗಳು ಬೇರೆ, ದಕ್ಷಿಣದಲ್ಲಿ ಬೇರೆ, ಕೋಸ್ಟಲ್ ಏರಿಯಾ ಬೇರೆ, ವೈಲ್ಡ್ ಲೈಫ್ ವಲಯ ಬೇರೆ, ಈ ರೀತಿ ರಾಜ್ಯದಲ್ಲಿ 5 ವಲಯಗಳನ್ನು ಮಾಡಿ, ಪ್ರತಿಯೊಂದು ವಲಯದಲ್ಲೂ, ಉದಾಹರಣೆಗೆ, ಹಳೇಬೀಡು, ಬೇಲೂರು, ಜೋಗ್ ಜಲಪಾತ....

ಅಧ್ಯಕ್ಷರು : ಅವರ ಪ್ರಶ್ನೆ ಏನೆಂದರೆ, ಕೆ.ಎಸ್.ಟಿ.ಡಿ.ಸಿ. ಯವರು ರನ್ ಮಾಡತಕ್ಕ ಹೋಟೆಲುಗಳಲ್ಲಿನ ಗುಣಮಟ್ಟ ಚೆನ್ನಾಗಿರುವುದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಅವರು 6 ತಿಂಗಳಿಂದ ಹೋಗಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು : ನೀವು ಅವರನ್ನು ಕರೆದುಕೊಂಡು ಹೋಗುವಂತಹ ಏರ್ಪಾಡು ಮಾಡಿ.

ಶ್ರೀ ಜೆ.ಹೆಚ್. ಪಟೇಲ್ : ಕೆಲವು ಕಡೆ ಸುಧಾರಿಸಿವೆ. ನಮ್ಮ ಹೊಸಪೇಟೆಯಲ್ಲಿ ನಾನೇ ಕಳೆದ 2-3 ತಿಂಗಳ ಹಿಂದೆ ಹೋಗಿದ್ದೆ. ಎಷ್ಟು ಸುಧಾರಿಸಿವೆ ಎಂದು ನೋಡಿದ್ದೇವೆ. ತಾವು ಹೋಗಿ ನೋಡಿ ಬನ್ನಿ.

ಶ್ರೀ ವಾಟಾಳ್ ನಾಗರಾಜ್ : ವಿದೇಶಿಯರು ಮಾತ್ರ ಆ ಹೋಟೆಲ್‌ಗಳಲ್ಲಿ ಉಳಿಯುವುದಿಲ್ಲ ಎನ್ನುವುದು ಸ್ಪಷ್ಟ. ಅದನ್ನು ನೋಡಿದರೆ ಅವರ ಜನ್ಮಜನ್ಮದಲ್ಲಿಯೂ ಅವರು ಅದರಲ್ಲಿ ಉಳಿಯುವುದಿಲ್ಲ, ಅಲ್ಲಿ ಬೀದಿ ನಾಯಿಗಳನ್ನು ಸಹ ಸಾಕುವುದಕ್ಕೆ ಆಗುವುದಿಲ್ಲ ಅಲ್ಲಿ ಅಂತಹ ಹೋಟೆಲ್‌ಗಳು.

ಅಧ್ಯಕ್ಷರು : ಸನ್ಮಾನ್ಯ ಪಟೇಲರ ನೇತೃತ್ವದಲ್ಲಿ ನಿಮ್ಮನ್ನೆಲ್ಲ ಒಳಗೊಂಡಂತೆ ಒಂದು ನಿಯೋಗವನ್ನು ಕಳುಹಿಸೋಣ. ನಂತರ ಬಂದು ತಾವು ನಮಗೆ ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ನಿಯೋಗ ಎಲ್ಲಿಗೆ.

ಅಧ್ಯಕ್ಷರು : ಈ ಹೋಟೆಲ್‌ಗಳನ್ನು ನೋಡುವುದಕ್ಕೆ

ಶ್ರೀ ವಾಟಾಳ್ ನಾಗರಾಜ್ : ಈ ಹೋಟೆಲ್‌ಗಳನ್ನು ನೋಡುವುದಕ್ಕೆ ನಿಯೋಗ ಏಕೆ? ಸಿಂಗಪುರ, ಅಮೇರಿಕಾದಲ್ಲಿರುವ ಹೋಟೆಲ್‌ಗಳನ್ನು ನೋಡಲು ನಿಯೋಗ ಕಳುಹಿಸಿದರೆ ಆಗಬಹುದು ಈ ಕೆಟ್ಟ ಹೋಟೆಲ್‌ಗಳನ್ನು ನೋಡುವುದಕ್ಕೆ ತಾವು ನಿಯೋಗ ಕಳುಹಿಸುತ್ತಿದ್ದೀರಿ, ಒಳ್ಳೆಯ ಕಥೆ.

Generation of Energy in State

352- Sri S.P. Muddahanumegowda (Kunigal), Sri U.B. Banakar (Hirekerur) : Will the Deputy Chief Minister be pleased to state?

a) The quantum of power generated in the State?

b) The quantum of Power received from other States?

c) The quantum of power required to meet the demands of the consumers of the State and the steps taken in this behalf.

d) The total revenue collected from the consumers?

Sri J.H. Patel (Deputy Chief Minister) :